***C.C.No.:12058/2021***
***P.W. :3***

**24ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು**

**ಸಿ.ಸಿ.ನಂ. 12058/2021**

**ಪ್ರಾ.ಸಾಃ 3**
**ಚಾ.ಸಾಃ 5**

| | |
|---|---|
| **ಸಾಕ್ಷಿಧಾರರ ಹೆಸರು** | **ಡಾ.ಸಂಜೀವ್ ಕುಮಾರ್** |
| **ತಂದೆಯ/ಗಂಡನ ಹೆಸರು** | **ಲೇಟ್.ಡಿ.ಲಕ್ಷ್ಮಣ್ ನಾಯಕ್** |
| **ವಯಸ್ಸು** | 49 ವರ್ಷ |
| **ಉದ್ಯೋಗ** | ವೈದ್ಯಾಧಿಕಾರಿಗಳು, ಕೆ.ಸಿ. ಜನರಲ್ ಆಸ್ಪತ್ರೆ ಬೆಂಗಳೂರು |
| **ವಿಳಾಸ** | ಕಣ್ಣೂರು, ಬೆಂಗಳೂರು. |

**ದಿನಾಂಕ ಃ 30.06.2023. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಓ.ಸ.ಸ.ಅ.ಃ**

ನಾನು ಏಪ್ರಿಲ್ 2013 ರಿಂದ ನಾನು ಮಲ್ಲೇಶ್ವರಂನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ದಿನಾಂಕ 17.11.2020 ರಂದು ಮಧ್ಯಾಹ್ನ 1.40 ಕ್ಕೆ ಚಾಸಾ.2 ರವರು ಚಾಸಾ.1 ರವರನ್ನು ದಿ.16.11.2020 ರಂದು ರಾತ್ರಿ 9.00 ಗಂಟೆಗೆ ಅಪರಿಚಿತರು ಆತನ ಮೇಲೆ ಹಲ್ಲೆ ಮಾಡಿರುತ್ತಾರೆಂದು ಮಾಹಿತಿ ನೀಡಿದ್ದು ಆತನ್ನನ್ನು ಪರೀಕ್ಷಿಸಿದಾಗ ಆತನ ಹಣೆಯ ಎಡಭಾಗದಲ್ಲಿ 1/2 * 1/4 ಸೆಂ.ಮೀ ನಷ್ಟು ಕೋಯ್ದು ಗಾಯವಿತ್ತು . ಅದಕ್ಕೆ ಸೂಕ್ತ ಚಿಕಿತ್ಸೆ ನೀಡಿರುತ್ತೇನೆ.

This is a True Copy of the Court Records Online. Authenticated @ districts.ecourtsindia.com/cnr/KABC030337442021/truecopy/order-2.pdf

ತನಿಖಾಧಿಕಾರಿಯ ಕೋರಿಕೆಯ ಮೇರೆಗೆ ನಾನು ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು **ನಿ.ಪಿ.3** ಎಂದು ಸಾಕ್ಷಿಯ ಸಹಿಯನ್ನು **ನಿ.ಪಿ.3(ಎ)** ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತದೆ. ಗುಂಪುಗಳಲ್ಲಿ ಜಗಳವಾಗುವಾಗ ನಿ.ಪಿ.3 ರಲ್ಲಿ ಕಾಣಿಸಿದ ಗಾಯ ಆಗುವ ಸಂಭವ ಇರುತ್ತದೆ.

**ಪಾಟೀ ಸವಾಲುಃ ಆರೋಪಿಪರ ಶ್ರೀಮತಿ ಜೆ.ಆರ್.ಎಸ್ ವಕೀಲರಿಂದ**

ಚಾಸಾ.2 ರವರನ್ನು ಬೈಕ್ ಮೇಲೆ ಬಿದ್ದ ಗಾಯಕ್ಕೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ.2 ರವರನ್ನು ಆತನ ಅಕ್ಕ ಚಾಸಾ.1 ರವರು ಕರೆದುಕೊಂಡು ಬಂದಿದ್ದರು . ಪೊಲೀಸ್ ರೆಫರೆನ್ಸ್ ಇರಲಿಲ್ಲ. ಚಿಕಿತ್ಸೆ ನೀಡಿದ ನಂತರ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ. ಪೊಲೀಸರಿಗೆ ನಾನು ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ.2 ರವರು ಮನೆಯ ಹತ್ತಿರ ಆದ ಗಲಾಟೆಯ ಗಾಯ ಎಂದು ಹೇಳಿರುತ್ತಾರೆ. ಗಾಯ ಯಾವಾಗ ಆಗಿತ್ತು ಎಂಬುದರ ಬಗ್ಗೆ ನಿ.ಪಿ.3 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ಪೊಲೀಸರಿಗೆ ನೀಡಿಲ್ಲ. ಪೊಲೀಸರಿಂದ ನಿವೇದನೆ ಬಂದ ನಂತರ ಚಾಸಾ.2 ರವರಿಗೆ ಯಾವುದೇ ಚಿಕಿತ್ಸೆ ಕೊಡದೆ ಇದ್ದರೂ ಸುಳ್ಳು

This is a True Copy of the Court Records Online. Authenticated @ districts.ecourtsindia.com/cnr/KABC030337442021/truecopy/order-2.pdf

www.ecourtsindia.com

ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿಸಿಕೊಟ್ಟಿದ್ದೇನೆಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರವನ್ನು ದಿ05.01.2021 ರಂದು ನೀಡಿದ್ದೇನೆಂದರೆ ಸರಿ.ಚಾಸಾ. 2 ರವರಿಗೆ ಹೊರರೋಗಿಯಾಗಿ ಚಿಕಿತ್ಸೆ ನೀಡಲಾಗಿದೆ ಎಂದರೆ ಸರಿ. ಒಬ್ಬ ವ್ಯಕ್ತಿ ಜಾರಿ ಹರಿತವಾದ ವಸ್ತುಗಳ ಮೇಲೆ ಬಿದ್ದರೆ ನಿ.ಪಿ.3 ರಲ್ಲಿ ಕಾಣಿಸಿದ ಗಾಯ ಆಗಿದೆ ಎಂದರೆ ಆಗುವ ಸಾಧ್ಯತೆ ಕಡಿಮೆ ಎನ್ನುತ್ತಾರೆ. ಚಾಸಾ.2 ರವರಿಗೆ ಯಾವುದೇ ಚಿಕಿತ್ಸೆ ನೀಡದೇ ಇದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೇ.ಸ.ಇ.ಒ**

**24 ನೇ ಅ.ಮು.ಮ.ದಂ.ನ್ಯಾ.**

This is a True Copy of the Court Records Online. Authenticated @ districts.ecourtsindia.com/cnr/KABC030337442021/truecopy/order-2.pdf